ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮುಂಜೂರು ಆದದ್ದು ನಷ್ಟವಾದ ಒಂದೂವರೆ ತಿಂಗಳಲ್ಲಿ ಆಗಿದೆ. ನನ್ನ ಹತ್ತಿರ ತಾರೀಖು ಇಲ್ಲ. ನಷ್ಟ ಆದ ಸ್ವಲ್ಪ ದಿವಸದಲ್ಲಿ ಮುಂಜೂರು ಆಗಿದೆ. ಮುಂಜೂರು ಆದ ಮೇಲೆ ಒಟ್ಟಿಗೆ ಜಿಲ್ಲೆಗೆ ಕೊಡಲಾಗಿದೆ. ಆ ಹಣವನ್ನು ಚಿಕ್ಕಹೊಳೆ ನಷ್ಟವಾದ ಸ್ಥಳದಲ್ಲಿ ಅಧಿಕಾರಿಗಳು ಅದನ್ನು ಉಪಯೋಗಿಸಿಕೊಂಡಿರುವುದು ಗೊತ್ತಾಗಿ ಆದಕ್ಕಾಗಿ ಕೂಡಲೇ ಕೊಡಬೇಕು ಎಂದು ಹೇಳಿದ್ದೇವೆ. 6 ತಿಂಗಳೊಳಗಾಗಿ ಹಣಕೊಡಲಾಗಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ವರ್ಷಗಳು ಸಹಿತ ಆದರೂ ಪರಿಹಾರ ದೊರೆಯದೆ ಹೋಗುವುದಕ್ಕೆ ಕಾರಣ ಏನು ? ಚಿಕ್ಕಹೊಳೆ ಪ್ರಕರಣ ಆದದ್ದು ಮೊನ್ನೆ ತಾನೇ ? ಚಿಕ್ಕಹೊಳೆ ಕಾರಣವಲ್ಲದೆ ಇನ್ನು ಏನಾದರೂ ಕಾರಣ ಇದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಏನು ಯಾವುದೂ ಇಲ್ಲ. ಇತ್ತೀಚೆಗೆ ಇನ್ನೊಂದು ಸ್ವಲ್ಪ ಕಾರಣ ಇದೆ. ಕ್ಷಾಮ ಪ್ರದೇಶಗಳಿಗೆ ಅನುಕೂಲಗಳನ್ನು ಒದಗಿಸಿಕೊಡುವುದಕ್ಕೆ ಈ ಪ್ರದೇಶದಿಂದ ಇನ್ನೊಂದು ಪ್ರದೇಶದ ರೈತರಿಗೆ ಪ್ರೋತ್ಸಾಹ ಕೊಡತಕ್ಕ ನಂದರ್ಭದಲ್ಲಿ ಕೇಂದ್ರದಿಂದ ಬಂದಿದ್ದ ಅಧ್ಯಯನ ತಂಡ ಗೊತ್ತು ಮಾಡಿರತಕ್ಕ ಹಣಕ್ಕೆ ಮೀರದಂತೆ ಕೊಡಬೇಕು ಎಂದು ಹೇಳಿದ್ದಾರೆ. ಅದರ ಮಿತಿಯೂ ಕೂಡ ಇದ್ದುದರಿಂದ ಸ್ವಲ್ಪ ನಿಧಾನವಾಯಿತು.

Distribution of sites to S.C./S.T. People in Tumkur District

776. **Sri B. BYRAPPAJI (Turuvekere).—**

Will the Minister for Revenue be pleased to state :—

(*a*) the number of villages in each of the taluks of Tumkur district which have been requesting from the last 5 years to acquire lands for building residential houses to Scheduled Castes and Scheduled Tribes people ;

(*b*) the extent of land acquired and the number of sites distributed so far ;

(*c*) whether there is any time limit for disiribution of sites to the remaining applicants ?

Sri N. HUTCHAMASTHY GOWDA (Minister for Revenue).—

(*a*) 88 villages. The details are furnished in the statement appended.

(*b*) (i) The extent of land Acquired : 62 Acres, 31½ Guntas.

(ii) The number of sites distributed : 1207.

(*c*) No.

STATEMENT

Sl. No.	Name of Taluk	*Vide* reply to clause (*a*) of the Question	*Vide* reply to clause (*b*) of the Question.		
			Acres	Guntas	Sites
1	Tumkur	10 Villages	12	22	178
2	Gubbi	13 do	14	10	248
3	Kunigal	23 do	13	14½	299
4	Tiptur	9 do	10	...	145
5	Turuvekere	10 do	3	09	62
6	Chikkanayakanahalli	5 do	2	18	55
7	Madhugiri	5 do	...	...	...
8	Koratagere	3 do	2	02	70
9	Sira	8 do	3	11	120
10	Pavagada	2 do	1	25	60
	Total ...	88 do	62	31½	1237 Sites

ಶ್ರೀ ಬಿ. ಬೈರಪ್ಪಾಜಿ.—88 ಹಳ್ಳಿಗಳಲ್ಲಿ ಎಷ್ಟು ಎಕರೆ ಜಮೀನನ್ನು ಆಕ್ಸೈರ್ ಮಾಡಿದ್ದೀರಿ; ಹರಿಜನ ಗಿರಿಜನರಿಗೆ ಎಷ್ಟು ಸೈಟುಗಳನ್ನು ಹಂಚಿದ್ದೀರಿ ; ಇನ್ನೂ ಹಂಚುವ ಸಂದರ್ಭ ಇದೆಯೇ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—62 ಎಕರೆ ಮೂವತ್ತೊಂದೂವರೆ ಕುಂಟೆ ಜಮೀನು ಬೇಕಾಗಿದೆಯೆಂದು ಕೇಳಿದ್ದಾರೆ. 1237 ಸೈಟುಗಳನ್ನು ಹಂಚಲಾಗಿದೆ.

ಶ್ರೀ ಬಿ. ಬೈರಪ್ಪಾಜಿ.—ಸ್ವಾಧೀನಪಡಿಸಿಕೊಂಡಿರುವುದು ಮತ್ತು ಹಂಚಿರುವುದು ಕೊಟ್ಟಿದ್ದೀರಿ. ಸ್ವಾಧೀನ ಪಡಿಸಿಕೊಳ್ಳಬೇಕಾಗಿರತಕ್ಕ ಜಮೀನು ಎಷ್ಟು ಎಕರೆ ; ಹಂಚಬೇಕಾದ ಸೈಟುಗಳ ಸಂಖ್ಯೆ ಎಷ್ಟು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಧೀನಪಡಿಸಿಕೊಂಡು ಹಂಚಿರತಕ್ಕದ್ದು ನಾನು ಹೇಳಿದೆ. ಉಳಿದಿದ್ದನ್ನು ಆದಷ್ಟು ಬೇಗ ಸ್ವಾಧೀನಪಡಿಸಿಕೊಂಡು ಸೈಟುಗಳನ್ನು ಹಂಚುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.—ಎಷ್ಟು ಎಕರೆ ಜಮೀನನ್ನು ತಾವು ಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ ; ಎಷ್ಟು ಸೈಟುಗಳನ್ನು ಹಂಚಬೇಕಾಗುತ್ತದೆ. ಈ ಅಂಕಿ ಅಂಶಗಳು ಇದ್ದರೆ ಕೊಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಳೆದ 5 ವರ್ಷಗಳಿಂದ 88 ಗ್ರಾಮಗಳಲ್ಲಿ 62 ಎಕರೆ ಮೂವತ್ತೊಂದೂವರೆ ಕುಂಟೆ ಜಮೀನು ಸ್ವಾಧೀನಪಡಿಸಿಕೊಂಡು, 1237 ಸೈಟುಗಳ ಹಂಚಿಕೆಯಾಗಿದೆ ಎಂದು ತಿಳಿಸಿದ್ದೇನೆ. ಉಳಿದ ವಿವರಗಳು ಅಕ್ಯಸಿಷನ್ ಆಗಬೇಕಾದುದು ಎಷ್ಟು ; ಎಷ್ಟು ಎಕರೆ ಭೂಮಿ ಬೇಕು ; ಎಷ್ಟು ಸೈಟುಗಳು ಹಂಚಬೇಕಾಗಿದೆ ಆ ವಿವರಗಳನ್ನು ತರಿಸಿ ನಾನು ಸಭೆಗೆ ತಿಳಿಸಬೇಕಾಗುತ್ತದೆ.

Sri J. P. SARWESH.—It has taken five years to acquire 62 acres of land and in some cases it hastaken even 15-20 years. Will the Government see that in one year the land is acquired ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ಅಸ್ತಿತ್ವಕ್ಕೆ ಬಂದ ಕೂಡಲೆ ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ವರ್ಷದ ಅಕ್ಸಿಸಿಡೆನ್ ಕೇಸುಗಳು ಇದೆ ಎಂಬ ಅಂಕಿ ಅಂಶಗಳನ್ನು ಸಂಗ್ರಹಿಸಿದಾಗ 22ವರ್ಷದ ಕೇಸುಗಳು ಇತ್ತು. ಈಗ ಅದನ್ನು 10 ವರ್ಷಕ್ಕೆ ಇಳಿಸಿಕೊಂಡು ಬಂದಿದ್ದೇವೆ. ಅದನ್ನು ಇನ್ನು 3 ತಿಂಗಳೋ ಅಥವಾ 6ತಿಂಗಳೊಳಗಾಗಿ ಒಂದು ವರ್ಷಕ್ಕೆ ಇಳಿಸುವ ಹಾಗೆ ಎಲ್ಲಾ ಅಧಿಕಾರಿಗಳಿಗೂ ನಿರ್ದೇಶನ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಪ್ರಭಾಕರ್.—ಸ್ವಾಮಿ 1237 ಸೈಟುಗಳ ಪೈಕಿ 1972-73ನೇ ಸಾಲಿನಲ್ಲಿ ಹಂಚಿದ ಸೈಟುಗಳ ಸಂಖ್ಯೆ ಎಷ್ಟು ? ಅದರಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಎಷ್ಟು : ತಾಲ್ಲೂಕುವಾರ್ ಎಷ್ಟು ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ವಿವರಗಳು ನನ್ನ ಹತ್ತಿರ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಅವರ ಸ್ಟೇಟ್‌ಮೆಂಟ್‌ನಲ್ಲಿ ಕೊಟ್ಟಿರುವ ಪ್ರಕಾರ ಗುಬ್ಬಿಯಲ್ಲಿ 248 ಸೈಟುಗಳನ್ನು ಹಂಚಿದ್ದಾರೆ, ಕುಣಿಗಲ್‌ನಲ್ಲಿ 249 ಸೈಟುಗಳು ಹಂಚಿದ್ದಾರೆ. ಆದರೆ ತುರುವೇಕೆರೆಯಲ್ಲಿ 67 ಸೈಟುಗಳನ್ನು ಮಾತ್ರ ಹಂಚಿದ್ದಾರೆ. ಇದರ ಅರ್ಥವೇನು ? ಏತಕ್ಕೆಂದರೆ ಕುಣಿಗಲ್ ತಮ್ಮ ಕ್ಷೇತ್ರವಾದ್ದರಿಂದ ತಮ್ಮ ಪ್ರಭಾವ ಬೀರಿ ಜಾಸ್ತಿ ಸೈಟುಗಳನ್ನು ಹಂಚಿದ್ದೀರಾ. ಮತ್ತು ತುರುವೇಕೆರೆ ಶ್ರೀಮಾನ್ ಬೈರಪ್ಪಾಜಿ ಅವರು ಪ್ರಭಾವ ಬೀರಿಲ್ಲ ಎಂದು ಕಡಿಮೆ ಯಾವರ ಕ್ಷೇತ್ರವಾದ್ದರಿಂದ ಸೈಟುಗಳನ್ನು ಕೊಟ್ಟಿದ್ದೀರಾ ? ಅಲ್ಲಿ ಕಡಿಮೆ ಸೈಟುಗಳನ್ನು ಹಂಚಿರುವುದಕ್ಕೆ ಕಾರಣ ಏನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಲ್ಲಯ ಅವಶ್ಯಕತೆಯ ಆಧಾರದ ಮೇಲೆ ಹಂಚಿಕ್ಕೆಯಾಗಿದೆ ಮಂತ್ರಿಗಳ ಪ್ರಭಾವದಿಂದಾಗಲಿ ಅಥವಾ ಸದಸ್ಯರೊಬ್ಬರ ಪ್ರಭಾವದಿಂದಾಗಲಿ ಇದು ಆಗಿರುವ ತಕ್ಕಂಥ ಕೆಲಸವಲ್ಲ.

ಶ್ರೀ ಎಂ.ಎಚ್. ಜಯಪ್ರಕಾಶ ನಾರಾಯಣ್.—ಸ್ವಾಮಿ 88 ಗ್ರಾಮಗಳಲ್ಲಿ ಪರಿಶಿಷ್ಟ ವರ್ಗ ಮತ್ತು ಪರಿಷ್ಟ ಜನಾಂಗದವರು ಸೈಟುಗಳನ್ನು ಕೇಳಿದ್ದರು. ಅದನ್ನು ಉತ್ತರದಲ್ಲಿ ಹೇಳಲಾಗಿದೆ ಮತ್ತು ಅಕ್ಸಿಸಿಡೆನ್ ಕೇಸುಸ್ 22ವರ್ಷ ಇದ್ದುದ್ದನ್ನು 10ವರ್ಷಕ್ಕೆ ಇಳಿಸಿದ್ದೇವೆ ಎಂದು ಹೇಳಿದಿರಿ. ಈ 88 ಗ್ರಾಮಗಳಲ್ಲಿ ಎಷ್ಟು ಜನ ಸೈಟುಗಳನ್ನು ಕೇಳಿದ್ದಾರೋ ಅವರೆಲ್ಲರಿಗೂ ಇನ್ನು ವರ್ಷದೊಳಗೆ ಕೊಡಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದಕ್ಕಾಗಿ ನಾನು ಪ್ರಯತ್ನ ಮಾಡುತ್ತೇನೆ ಎಂದು ಈಗಾಗಲೇ ಸಭೆಗೆ ವಿನಂತಿ ಮಾಡಿಕೊಂಡಿದೆ

SHORT NOTICE QUESITON AND ANSWER

Fire Accident in Pallerayana Village, Kunigal Taluk

2. | Sri M. H, JAYAPRAKH NARAYAN (Sirsi).—

Will the Minister for Revenu be pleased to state.—

(*a*) whether it has come to the notice of the Government that the residential houses belonging to Sriyuths : Channe Gowda and Kenchiah of Pallerayana Village, Amrithur Hobli, Kunigal Taluk were victims of accidental Fire at 3-00 P.M. on Friday the 5 th January 1973 ;

(*b*) if so, the extent of loss sustained by these families in respect of people, cattle etc. ;

(*c*) the dates on which the affected families have submitted their representations to Tahsildar and B.D.O. ;